**ದಿಃ07.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:**-ಪ್ರತಿವಾದಿ ಪರ ಶ್ರೀ.ಪಿ.ವೈ.ಹೆಚ್., ವಕೀಲರಿಂದಃ-

ನಾನು 10 ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣಪತ್ರ ತಯಾರಿಸಲು ನನಗೆ ಯಾರೂ ಮಾಹಿತಿ ನೀಡಿರುವುದಿಲ್ಲ. ಸದರಿ ಪ್ರಮಾಣ ಪತ್ರವನ್ನು ವಾದಿ ತಯಾರಿಸಿ

ನನಗೆ ನೀಡಿದಾಗ ನಾನು ಸಹಿ ಮಾಡಿರುತ್ತೇನೆ. ನಾವು ಮೂರು ಜನ ಅಣ್ಣತಮ್ಮಂದಿರು ಇರುತ್ತೇವೆ. ನಮ್ಮ ನಡುವೆ ಆಸ್ತಿ ಪಾಲು ಭಾಗ ಆಗಿರುತ್ತದೆ. ಮನೆತನದ ಆಸ್ತಿಗಳನ್ನು ಪಾಲು ಮಾಡುವಾಗ ಯಾರಿಗೆ ಎಷ್ಟು ಪಾಲು ಮತ್ತು ಬಿಟ್ಟಿರುವ ಆಸ್ತಿಗಳ ಬಗ್ಗೆ ಪಾಲು ವಿಭಾಗ ಪತ್ರದಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ಮತ್ತು ನನ್ನ ತಮ್ಮ ಶಂಬುಲಿಂಗ ರವರ ಭಾಗಕ್ಕೆ 536 ನೇ ನಂಬರಿನ ಮನೆ ಬಂದಿರುತ್ತದೆ. ಸದರಿ 536 ನೇ ನಂಬರಿನ ಭಾಗದಲ್ಲಿ ಪೋಡು ಆಗಿದ್ದಲ್ಲಿ 536/1 ಮತ್ತು 536/2 ಎಂದು ಪೋಡು ಆಗುತ್ತದೆ ಎಂದರೆ ಸರಿ. ನಾನು ಮತ್ತು ವಾದಿ ನಡುವೆ ಸಂಬಂದ ಚೆನ್ನಾಗಿರುತ್ತದೆ. ವಾದಿಯವರಿಗೆ ಎಷ್ಟು ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈಗ ನನಗೆ ತೋರಿಸಿರುವ ಪೋಟೋಗಳಲ್ಲಿ ಕಾಣುವ ನಿಂತಿರುವ ಮಹಿಳೆಯು 1ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಸದರಿ ಪೋಟೋಗಳನ್ನು ಕ್ರಮವಾಗಿ ನಿ.ಡಿ.1 ರಿಂದ 6 ಎಂದು ಗುರುತಿಸಲಾಯಿತು. ನಿ.ಡಿ.4 ರಲ್ಲಿ ಕಾಣುತ್ತಿರುವ ಮನೆ ವಾದಿಯ ಮನೆಯಾಗಿರುತ್ತದೆ ಎಂದರೆ ಸರಿ. ಸದರಿ ಮನೆಯ ಎಡಭಾಗಕ್ಕೆ ಒಂದು ಜೆರಾಕ್ಸ್ ಅಂಗಡಿ ಇರುತ್ತದೆ ಎಂದರೆ ಸರಿ. ನಿ.ಡಿ.5 ರಲ್ಲಿ ಕಾಣುತ್ತಿರುವ ಮನೆಗಳು ಪ್ರತಿವಾದಿಗಳಿಗೆ ಸೇರಿರುತ್ತವೆ ಎಂದರೆ ಸರಿಯಲ್ಲ. ನಾನು ಸದರಿ ಮನೆಗಳು ಯಾರದ್ದು ಎಂದು ನನಗೆ ಗೊತ್ತಿಲ್ಲದೇ ಇದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಆಸ್ತಿಗಳ ಬಗ್ಗೆ ನನಗೆ ಏನು ಗೊತ್ತಿಲ್ಲ ಅದನ್ನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

sd

**ಸಿವಿಲ್ ನ್ಯಾಯಾಧೀಶರು, ಜಗಳೂರು**